ಹೊಸಪೇಟೆಯಲ್ಲಿ ನೂರು ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ನಿರ್ಮಿಸುವುದು.

೧೯೧. (೪೫೯) ಶ್ರೀ ಎಸ್. ಶಂಕರಗೌಡ (ಹೊಸಪೇಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆಯಲ್ಲಿ ೧೦೦ ಹಾಸಿಗೆಗಳ ಆಸ್ಪತ್ರೆಯನ್ನು ಹಿಂದಿನ ವರ್ಷದಿಂದ ಕಟ್ಟಲು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿರುತ್ತದೆ?

ಇ) ತಡವಾಗಲು ಕಾರಣಗಳೇನು?

ಶ್ರೀ. ಪಿ.ಜಿ.ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಹೌದು.

ಆ) ಕಟ್ಟಡವು ಪೀಲ್ಟಾವಣಿಯವರೆಗೆ ಬಂದಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಚನ್ನಬಸವನಗೌಡ (ಶ್ರೀ ಕೆ. ಜಿ. ಶಂಕರಗೌಡ ಅವರ ಪರವಾಗಿ)

ಕಟ್ಟಡ ಪ್ರಾರಂಭವಾಗಿ ಎರಡು ವರ್ಷ ಆಯಿತು. ಇನ್ನೂ ಮುಗಿದಿಲ್ಲ. ಇನ್ನೂ ಎಷ್ಟು ವರ್ಷ ಬೇಕಾಗುತ್ತದೆ? ಕಟ್ಟಡವನ್ನು ಎಷ್ಟು ವರ್ಷದಲ್ಲಿ ಮುಗಿಸಬಹುದು?

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ಮುಗಿಸುತ್ತೇವೆ.

ಮಾಜಿ ಮುಖ್ಯಮಂತ್ರಿ ದಿವಂಗತ ಶ್ರೀ. ಕೆಂಗಲ್ ಹನುಮಂತಯ್ಯ ನವರ ಪ್ರತಿಮೆಯನ್ನು ವಿಧಾನ ಸೌಧದ ಮುಂದೆ ಸ್ಥಾಪಿಸುವ ಬಗ್ಗೆ

೪೬೦ (೧೮೮೫) ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಮಾಜಿ ಮುಖ್ಯಮಂತ್ರಿ ದಿ. ಶ್ರೀ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ವಿಧಾನ ಸೌಧದ ಮುಂದೆ ಸ್ಥಾಪಿಸುವ ಸಲಹೆ ಸರಕಾರದವರಲ್ಲಿದೆಯೆ :

ಆ) ಸರಕಾರ ಈ ಬಗ್ಗೆ ಭರವಸೆ ನೀಡಿ ಪ್ರತಿಮೆಯನ್ನು ನಿರ್ಮಿಸಲು ಪ್ರಸಿದ್ಧ ಶಿಲ್ಪಿಯೊಬ್ಬರಿಗೆ ಪಹಿಸಿರುವುದು ನಿಜವೆ : ಮತ್ತು ಆ ಕೆಲಸ ಯಾವ ಹಂತದಲ್ಲಿರುತ್ತದೆ,

ಇ) ದಿ. ಶ್ರೀ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಅನಾವರಣ ಮಾಡಲು. ತೀವ್ರ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಯವರು).—ಅಹುದು.

ನಿಜ. ಕಂಚಿನ ಪ್ರತಿಮೆಯನ್ನು ತಯಾರಿಸುವ ಕಾರ್ಯ ಈಗಾಗಲೇ ಪೂರ್ತಿಗೊಂಡಿದೆ.

ಪ್ರತಿಮೆಯನ್ನು ಸ್ಥಾಪಿಸಿ ಅದನ್ನು ಅನಾವರಣ ಮಾಡಲು ತೀವ್ರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ. ಪುಟ್ಟಸ್ವಾಮಿ ಗೌಡ.—ಸಭಾಧ್ಯಕ್ಷರೆ, ಪ್ರತಿಮೆ ಪೂರ್ಣಗೊಂಡಿದೆ ಎಂದು ಹೇಳಿದ ಹೋಲಿ ಅದನ್ನು ಅನಾವರಣ ಮಾಡುವುದಕ್ಕೆ ವಿಳಂಬ ಏತಕ್ಕೆ ? ನನ್ನ ಪ್ರಶ್ನೆಗೆ ಉತ್ತರವಾಗಿ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಸ್ಥಾಪಿಸಿ ಅದನ್ನು ಅನಾವರಣ ಮಾಡಲು ತೀವ್ರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಅಂದರೆ ನಿರ್ದಿಷ್ಟವಾದ ಅವಧಿಯನ್ನು ಈ ಸಭೆಯಲ್ಲಿ ಪ್ರಕಟ ಪಡಿಸುವುದಕ್ಕೆ ಸಾಧ್ಯವೆ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರತಿಮೆ ಪೂರ್ಣಗೊಂಡಿದೆ. ಆದರೆ ಅದಕ್ಕೆ ಬೇಕಾದ ಪೀಠವನ್ನು ಮಾಡುವ ಕೆಲಸ ನಡೆಯುತ್ತಿದೆ. ಅದನ್ನು ಮಾಡಿಸುತ್ತಿದ್ದೇವೆ. ಮತ್ತು ಎಲ್ಲಿ ಪ್ರತಿಮೆ ಸ್ಥಾಪನೆ ಮಾಡಬೇಕು ಎಂಬುದನ್ನು ಪರಿಶೀಲಿಸಲು ಮಂತ್ರಿಮಂಡಲದ ಸಣ್ಣ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿ ವರದಿ ಇನ್ನೂ ಬಂದಿಲ್ಲ. ಉತ್ತಮವಾದ ಸ್ಥಾನದಲ್ಲಿ ಪ್ರತಿಮೆಯನ್ನು ಸ್ಥಾಪಿಸಬೇಕಾಗಿದೆ. ಆದ್ದರಿಂದ ವಿಳಂಬವಾಗಿದೆ. ಇಂಥ ತಾರೀಖಿಗೇ ಮಾಡುತ್ತೇವೆ. ಎಂದು ಆಶ್ವಾಸನೆ ಕೊಡತಕ್ಕದ್ದು ಸಾಧ್ಯವಿಲ್ಲ. ಆದರೆ ಒಳ್ಳೆಯ ಮುಹೂರ್ತವನ್ನು ನೋಡಿ ಮಾಡುತ್ತೇವೆ.

ಡಾ॥ ಎಚ್.ಎಲ್. ತಿಮ್ಮೇಗೌಡ.—ನವೆಂಬರ್ ೧ನೇ ತಾರೀಖು ಕರ್ನಾಟಕ ರಾಜ್ಯ ಉದಯವಾದದ್ದು. ಮಾನ್ಯ ಕೆಂಗಲ್ ಹನುಮಂತಯ್ಯನವರು ಕರ್ನಾಟಕ ರಾಜ್ಯ ಒಂದಾಗುವುದಕ್ಕೆ ಹೆಚ್ಚಿಗೆ ಶ್ರಮಿಸಿದ್ದಾರೆ. ಆದ್ದರಿಂದ ಆ ತಾರೀಖಿನಲ್ಲಿಲ್ಲಾದರೂ ಪ್ರತಿಮೆ ಪ್ರತಿಷ್ಠಾಪನೆ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಒಳ್ಳೆಯ ಸೂಚನೆ. ಸಾಧ್ಯವಾದರೆ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಪುಟ್ಟಸ್ವಾಮಿ ಗೌಡ.—ಸ್ಥಳ ಪರಿಶೀಲನೆ ಮಾಡುವುದಕ್ಕೆ ಮಂತ್ರಿ ಮಂಡಲ ಉಪ ಸಮಿತಿ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ನನಗೆ ತಿಳಿದಮಟ್ಟಿಗೆ ವಿಧಾನಸೌಧದ ಮುಂದೆ ನಿರ್ಮಾಣ ಮಾಡಬೇಕೆಂದು: ಈ ಸಭೆಯ ಮತ್ತು ಸಾರ್ವಜನಿಕರ ಅಭಿಪ್ರಾಯವಿತ್ತು. ಇದು ಸರ್ಕಾರದ ಗಮನದಲ್ಲಿದೆಯೆ?

ಶ್ರೀ ರಾಮಕೃಷ್ಣ ಹೆಗಡೆ.—ಅದರಲ್ಲಿ ಪ್ರಾಮಿನೆಂಟ್ ಜಾಗ ಹುಡುಕಬೇಕು. ಪ್ರಾಮಿನೆಂಟ್ ಜಾಗ ಎಂದರೆ ಮೆಟ್ಟಿಲುಗಳ ಮೇಲೆ ಹಾಕಲಿಕ್ಕೆ ಬರುವುದಿಲ್ಲ. ಇನ್ನೂ ಕೆಲವು ಪ್ರತಿಮೆಗಳನ್ನು ಹಾಕುವ ಸೂಚನೆ ನಮ್ಮ ಮುಂದೆ ಇದೆ. ಅವುಗಳನ್ನು ಎಲ್ಲಿ ಹಾಕಬೇಕು ಎಂಬುವುದನ್ನೂ ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಅದಕ್ಕಾಗಿ ಸಣ್ಣ ಸಮಿತಿ ಮಾಡಿದ್ದೇವೆ. ಮೂರ್ನಾಲ್ಕು ಜನ ಮಂತ್ರಿಗಳು ಅದರಲ್ಲಿದ್ದಾರೆ. ಮಾನ್ಯ ದೇವೇಗೌಡರು ಮತ್ತು ಇತರ ಮಂತ್ರಿಗಳು ಅದರಲ್ಲಿದ್ದಾರೆ. ಕಮಿಟಿಯವರು ಯೋಗ್ಯವಾದ ನಿರ್ಣಯ ತೆಗೆದುಕೊಳ್ಳುತ್ತಾರೆಂಬ ವಿಶ್ವಾಸ ನನಗಿದೆ

ಶ್ರೀ ಎನ್.ಜಿ. ನಾಯಕ್.—ಡಾಕ್ಟರ್ ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ವಿತಕ್ಕೆ. ಹಾಕಬಾರದು ?

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಸದಸ್ಯರ ಸಲಹೆ ಏನೆಂದರೆ, ಡಾ. ಅಂಬೇಡ್ಕರ್‌ರವರ ಮತ್ತು ಹನುಮಂತಯ್ಯನವರ ಪ್ರತಿಮೆಗಳನ್ನು ಮುಖಾಮುಖಿ ಅಥವಾ ಹಣಾಹಣಿ ಇಡಬೇಕೆಂದು ಹೇಳುತ್ತಿದ್ದಾರೆ. ಅವರ ಸೂಚನೆಯನ್ನು ನಾವು ತೆಗೆದುಕೊಂಡರೂ ಅದನ್ನು ತಜ್ಞರ ಸಲಹೆ ಮೇರೆಗೆ ಮಾಡಬೇಕಾಗುತ್ತದೆ.

ಎಂ.ಎಂ. ನಡಾಫ್‌ರವರ ಪ್ರಶ್ನೆ ನಂ. ೪೪೧(೨೧೦)—ಸದಸ್ಯರು ಗೈರುಹಾಜರಿ

ಮಂತ್ರಿಗಳಿಂದ ಆಸ್ತಿಯ ಘೋಷಣೆ

ಪ್ರಶ್ನೆ ಸಂಖ್ಯೆ ೪೪೧ (೨೧೦) ಶ್ರೀ ಎಂ.ಎಂ. ನಡಾಫ್ (ಶಿಗ್ಗಾಂವ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಮಾನ್ಯ ಮುಖ್ಯಮಂತ್ರಿಗಳು ತಮ್ಮ ಎಲ್ಲ ಮಂತ್ರಿಗಳನ್ನು ಅವರ ಆಸ್ತಿಪಾಸ್ತಿಗಳ ವಿವರವನ್ನು ಘೋಷಿಸಿರುವಂತೆ ಕೇಳಿರುವುದು ನಿಜವೇ.

ಆ) ಹಾಗಿದ್ದಲ್ಲಿ, ತಮ್ಮ ಆಸ್ತಿಪಾಸ್ತಿಗಳನ್ನು ಘೋಷಿಸಿರುವ ಮಂತ್ರಿಗಳ ಸಂಖ್ಯೆ ಮತ್ತು ಹೆಸರುಗಳು.